**ಸಾಕ್ಷಿಯನ್ನು ದಿಃ 23.08.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ಸಿ.ಡಿ ವಕೀಲರಿಂದಃ**

ನನ್ನ ತಂದೆಗೆ ಒಟ್ಟು 10 ಜನ ಮಕ್ಕಳು ಇರುತ್ತಾರೆ. ನನಗೆ ಈಗ 69 ವರ್ಷ ವಯಸ್ಸು. ನಾನು ದ್ವಿತೀಯ ಪಿ.ಯು.ಸಿ. ವ್ಯಾಸಂಗ ಮಾಡಿರುತ್ತೇನೆ. 1 ನೇ ವಾದಿಯೂ ಸಹ ದ್ವಿತೀಯ ಪಿ.ಯು.ಸಿ ವ್ಯಾಸಂಗ ಮಾಡಿರುತ್ತಾರೆ. ನನ್ನ ತಂದೆ ನರಸಿಂಹಯ್ಯ ಅವರು ಎಲ್ಲ ಮಕ್ಕಳಿಗೂ ಒಳ್ಳೆಯ ವಿದ್ಯಾಭ್ಯಾಸ ನೀಡಿದ್ದರು ಅಂದರೆ ಸರಿ . 1 ನೇ ವಾದಿಗೆ ಸರ್ಕಾರಿ ಕೆಲಸ ಅವರ ವಿದ್ಯಾಭ್ಯಾಸದ ಮೇಲೆ ದೊರಕಿರುತ್ತದೆ ಅಂದರೆ ಸರಿ . 1 ನೇ ವಾದಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ಸರಿ . ನನ್ನ ತಂದೆ ಚನ್ನರಾಯಪಟ್ಟಣ ದ ಪುರಸಭೆಯ ಬಳಿ ನನ್ನ ಜೀವನಕ್ಕಾಗಿ ಒಂದು ಪಾತ್ರೆಯ ಅಂಗಡಿಯನ್ನು ನನಗಾಗಿ ಇರಿಸಿಕೊಟ್ಟಿದ್ದರು ಅಂದರೆ ಸರಿ. ಸದರಿ ಅಂಗಡಿಯಿಂದ ನಾನು ನನ್ನ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದೆ ಅಂದರೆ ವಾದಿಯು ನಾವು ಒಟ್ಟು ಕುಟುಂಬದಲ್ಲಿ ಇದ್ದು ಎಲ್ಲರ ಜೀವನ ನಿರ್ವಹಣೆ ಸದರಿ ಅಗಡಿಯಿಂದ ನಡೆಯುತ್ತಿತ್ತು ಎಂದು ಸ್ವತಃ ನುಡಿಯುತ್ತಾರೆ. ನನ್ನ ತಂದೆ ಅಂಗಡಿಯ ಬಾಡಿಗೆಯನ್ನು ಕಟ್ಟುತ್ತಿದ್ದರು ಅಂದರೆ ಸರಿಯಲ್ಲ. ನಾನೇ ಅಂಗಡಿಯ ಬಾಡಿಗೆಯನ್ನು ಕಟ್ಟುತ್ತಿದ್ದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನನ್ನ 3 ಜನ ತಂಗಿಯರಿಗೂ ನನ್ನ ತಂದೆಯೇ ಮದುವೆ ಮಾಡಿಸಿಕೊಟ್ಟರು ಅಂದರೆ ಸರಿ. ನನ್ನ ತಂದೆ ರೆವಿನ್ಯೂ ಇನ್ಸ್ ಪೆಕ್ಟರ್ ಆಗಿ ಇದೇ ಚನ್ನರಾಯಪಟ್ಟಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು ಅಂದರೆ ಸರಿ. ನನ್ನ ಮದುವೆ ಆದ ನಂತರ ನಮ್ಮ ನಮ್ಮ ಕುಟುಂಬ ಪ್ರತ್ಯೇಕವಾಗಿ ವಾಸವಾಗಿದ್ದೆವು ಅಂದರೆ ಸರಿ . ನಾವು ಪ್ರತ್ಯೇಕವಾಗಿ ಹೋಗುವ ಸಮಯದಲ್ಲಿ 1 ನೇ ಪ್ರತಿವಾದಿಯು ಕೆಲಸದಲ್ಲಿ ಇದ್ದು 2 ಮತ್ತು 3 ನೇ ಪ್ರತಿವಾದಿಯರಿಗೆ ಕೆಲಸ ಇರಲಿಲ್ಲ. ನನ್ನ ತಂದೆ 1 ರಿಂದ 3 ನೇ ಪ್ರತಿವಾದಿಯರ ಜೊತೆ ಹಾಸನದಲ್ಲಿ ವಾಸವಾಗಿದ್ದರು ಅಂದರೆ ಸರಿಯಲ್ಲ. ನನ್ನ ತಂದೆ ರೆವಿನ್ಯೂ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರಣ 1972 ರಲ್ಲಿ ನನ್ನ ತಂದೆಗೆ ದಾವಾ ಸ್ವತ್ತು ಕರ್ನಾಟಕ ಹೌಸಿಂಗ್ ಬೋರ್ಡ್ ಅವರಿಂದ ಮಂಜೂರಾಯಿತು ಅಂದರೆ ಸರಿ. ರೂ.21,783/-ಗಳಿಗೆ ಚನ್ನರಾಯಟ್ಟಣದ ನೊಂದಣಿ ಕಛೇರಿಯಲ್ಲಿ ನನ್ನ ತಂದೆಯ ಹೆಸರಿಗೆ ಸದರಿ ದಾವಾ ಸ್ವತ್ತು ನೊಂದಣಿ ಆಯಿತು ಅಂದರೆ ಸರಿ . ನನ್ನ ತಂದೆಗೆ ಬಂದ ಸರ್ಕಾರಿ ಸಂಬಳದಿಂದ ಸದರಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಅಂದರೆ ಸರಿಯಲ್ಲ.

ಸದರಿ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಅಂದರೆ ಸರಿ . ಸದರಿ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಬರುವುದಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ವಿಲ್ ಅನ್ನು ಪ್ರತಿವಾದಿಯರ ಹೆಸರಿಗೆ ಮಾಡಿರುವುದಿಲ್ಲ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನನಗೂ ಭಾಗ ಬರಬೇಕು ಎಂದು ನಾನು ನೋಟೀಸನ್ನು 2 ನೇ ಪ್ರತಿವಾದಿಗೆ ಕಳುಹಿಸಿರುತ್ತೇನೆ ಅಂದರೆ

ಸರಿ . ನಾನು ಕಳುಹಿಸಿರುವ ನೋಟೀಸನ್ನು ನಾನು ಈಗ ನೋಡುತ್ತಿದ್ದು ಅದರಲ್ಲಿ ವಕೀಲರ ಸಹಿ ಮತ್ತು ಮೊಹರು ಇರುವುದಿಲ್ಲ ಎಂಬುದರ ಕುರಿತು ನನಗೆ ಗೊತ್ತಿಲ್ಲ. ನನ್ನ ತಂದೆಯ ನಿವೃತ್ತಿ ಜೀವನದ ನಂತರ ನನ್ನ ತಂದೆ ತಾಯಿಯ ಪಾಲನೆ ಪೋಷಣೆ ನಾನು ಮಾಡಿರುವುದಿಲ್ಲ ಅಂದರೆ ಸುಳ್ಳು. 1 ರಿಂದ 3 ನೇ ಪ್ರತಿವಾದಿಗಳು ನನ್ನ ತಂದೆ ತಾಯಿಯ ಪಾಲನ ಪೋಷಣೆ ಮಾಡುತ್ತಿದ್ದರಿಂದ ದಿ.30.06.1988 ರಂದು ನನ್ನ ತಂದೆಯವರು 1 ರಿಂದ 3 ನೇ ಪ್ರತಿವಾದಿಗಳಿಗೆ ವಿಲ್ ಮಾಡಿರುತ್ತಾರೆ ಅಂದರೆ ಇರಬಹುದು ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ವಿಲ್ ಕುರಿತು ನನ್ನ ತಂದೆ ಎಲ್ಲರಿಗೂ ವಿಷಯ ತಿಳಿಸಿದ್ದರು ಅಂದರೆ ಸುಳ್ಳು. ನನ್ನ ತಂದೆ ಜಿವಂತವಾಗಿದ್ದಾಗ ಸದರಿ ಆಸ್ತಿಯ ಕುರಿತು ಸದರಿ ದಾವಾ ಸ್ವತ್ತಿನಲ್ಲಿ ನಾನು ಯಾವುದೇ ಪಾಲನ್ನು ಕೇಳಿರಲಿಲ್ಲ ಅಂದರೆ ಸರಿ . ನನ್ನ ತಂದೆಯು ಬದುಕಿದ್ದಾಗ ಯಾವುದೇ ಪಾಲನ್ನು ಕೇಳದೇ ಅವರು ಮರಣ ಹೊಂದಿದ ಸುಮಾರು ವರ್ಷಗಳ ನಂತರ ನಾನು ಪಾಲು ಕೇಳುತ್ತಿದ್ದೇನೆ ಅಂದರೆ ಸರಿ .
ಈ ಆಸ್ತಿಯಲ್ಲಿ ಪಾಲು ಕೇಳಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ವಿಲ್ ಬರೆದ 6 ವರ್ಷಗಳ ನಂತರ ನನ್ನ ತಂದೆ ತೀರಿಕೊಂಡರು ಅಂದರೆ ಸರಿ . ನಮ್ಮ ಕುಟುಂಬದಲ್ಲಿ ಈ ಆಸ್ತಿ ಬಿಟ್ಟರೆ ಬೇರೆ ಆಸ್ತಿ ಇಲ್ಲ ಅಂದರೆ ಸರಿ .

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಮಮತ.ಪಿ.)**
**2 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**